ಇಂದು ದಿನಾಂಕ: 18-02-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲು:** ವಾದಿ ಪರ ಶ್ರೀ ಕೆ.ಎಸ್.ಆರ್ **ವಕೀಲರಿಂದ :-**

12 ವರ್ಷಗಳಿಗಿಂತ ಹಿಂದಿನಿಂದ ನನಗೂ ಮತ್ತು ವಾದಿಗೂ ಪರಿಚಯವಿದೆ. ನಾನು ಪಿ.ಯು.ಸಿ. ವರೆಗೆ ಓದಿದ್ದೇನೆ. ನನ್ನ ಮೊದಲನೆಯ ವರ್ಷದ ಪಿ.ಯು.ಸಿ. ಅಭ್ಯಾಸ ಇಂಗ್ಲೀಷ್ ಮಾಧ್ಯಮದಲ್ಲಿ ವಿಜ್ಞಾನ ವಿಷಯವನ್ನು ಅಧ್ಯಯನ ಮಾಡಿದ್ದೇನೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ . ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ, ನನಗೆ ಕನ್ನಡ ಓದಲು ಬರುವುದಿಲ್ಲ. ವಾದಿಗೆ ನಾನು ಕಳುಹಿಸಿದ ಕಾನೂನುಬದ್ಧ ನೋಟಿಸಿನ ಉತ್ತರ ಪತ್ರದಲ್ಲಿ ಬರೆದ ಎಲ್ಲಾ ಸಂಗತಿಗಳು ನನಗೆ ಗೊತ್ತಿವೆ. ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿದಾರರಿಗೆ ನಿಪಿ-4 ನ್ನು ಮೊಖಾಬಿಲೆ ಮಾಡಿ ಅದು ನೀವು ವಾದಿಗೆ ಕಳುಹಿಸಿದ ಉತ್ತರ ಎಂದು ಸೂಚಿಸಿದಾಗ ಸಾಕ್ಷಿದಾರರು ಹೌದು ಎಂದು ಉತ್ತರಿಸಿರುತ್ತಾರೆ. ನಿಪಿ-4 ರಲ್ಲಿ ವಾದಿಗೆ ನಾನು ದಿ:20-07-2017 ರಂದು Mortgage deed ಬರೆದು ಕೊಟ್ಟಿದ್ದೇನೆಂದು ಒಪ್ಪಿಕೊಂಡಿದ್ದೇನೆ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿದಾರರಿಗೆ ವಾದಿ ಪರ ವಕೀಲರು ನಿಪಿ-1 ರಡಿಯಲ್ಲಿರುವ Mortgage deed ನ್ನು ಮೊಖಾಬಿಲೆ ಮಾಡಿ ಅದರ ಮೇಲೆ ನಿಮ್ಮ ಸಹಿ ಇದೇ ಏನು ಎಂದು ಪ್ರಶ್ನಿಸಿದಾಗ ಸಾಕ್ಷಿದಾರರು ನಿಪಿ-1 ರ ಮೇಲಿರುವ ತನ್ನ 2 ಸಹಿಗಳನ್ನು ತಾನು ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. (ಸಾಕ್ಷಿದಾರರು ನಿಪಿ-1 ರ ಮೇಲಿರುವ ತನ್ನ 2 ಸಹಿಗಳನ್ನು ನೋಡಿ ಗುರುತಿಸಿ ಒಪ್ಪಿಕೊಂಡಿರುವುದರಿಂದ ಅವುಗಳನ್ನು ನಿಪಿ-1(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿಪಿ-1 ನ್ನು ನಾಗರಾಜ್ ಬಳೇಗಾರ ಎಂಬ ದಸ್ತವೇಜು ಬರಹಗಾರರು ಬರೆದಿದ್ದಾರೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಸದರಿ ದಸ್ತವೇಜು ಬರಹಗಾರರು

ಅದರಲ್ಲಿ ಬರೆದಿರುವ ಬಡ್ಡಿದರದ ಬಗ್ಗೆ ನನಗೆ ಓದಿ ಹೇಳಿರುವುದಿಲ್ಲ ಎನ್ನುತ್ತಾರೆ. ಸದರಿ ಬಡ್ಡಿ ದರದ ಬಗ್ಗೆ ನನಗೆ ಓದಿ ಹೇಳಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-4 ರಲ್ಲಿ ಬಡ್ಡಿದರ 2 ಎಂದು ಬರೆಯಲಾಗಿದೆ ಎಂದರೆ ನಿಜ. ನಿಪಿ-4 ರಲ್ಲಿ ಬಡ್ಡಿದರ 1 ಎಂದು ಬರೆದಿಲ್ಲ ಎಂದರೆ ನಿಜ. ವಾದಿಯಿಂದ ಮೂಲತ: ಒಟ್ಟು ಎಷ್ಟು ಸಾಲ ಪಡೆದಿದ್ದೀರಿ ಎಂದರೆ ಸಾಕ್ಷಿದಾರರು 11 ಲಕ್ಷ ಪಡೆದಿದ್ದೇನೆ ಎನ್ನುತ್ತಾರೆ. ಸಾಕ್ಷಿದಾರರು ಮುಂದುವರೆದು 7 ಲಕ್ಷ ನಾನು ವಾದಿಗೆ ವಾಪಸ್ಸು ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ 7 ಲಕ್ಷ ನಾನು ಅಸಲಿನಲ್ಲಿ ಜಮೆ ತೆಗೆದುಕೊಳ್ಳಬೇಕೆಂದು ಕೊಟ್ಟಿದ್ದೇನೆ. ನಾನು ವಾದಿಯಿಂದ 2017 ರಲ್ಲಿ ಸಾಲ ಪಡೆದಿದ್ದೇನೆ. ಸದರಿ 7 ಲಕ್ಷ ವಾದಿಗೆ ನಾನು 2021 ರಲ್ಲಿ ಕೊಟ್ಟಿದ್ದೇನೆ. ಸದರಿ 11 ಲಕ್ಷ ಸಾಲದ ಬಡ್ಡಿ ವಾದಿಗೆ ಕೊಟ್ಟಿಲ್ಲ ಎಂದರೆ ಸರಿ. ವಾದಿಗೆ ನಾನು ರೂ.37,31,527/- ಗಳನ್ನು ಕೊಡಲು ಬಾಧ್ಯನಾಗಿದ್ದೇನೆ ಎಂದರೆ ಸರಿಯಲ್ಲ. ದಿ:20-07-2017 ರಿಂದ ದಿ:29-02-2024 ರವರೆಗೆ ರೂ.37,31,527/- ರೂಪಾಯಿಗಳನ್ನು ನಾನು ವಾದಿಗೆ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಸದರಿ ರೂ.37,31,527/- ರಲ್ಲಿ ನಾನು ವಾದಿಗೆ ಕೊಟ್ಟ 7 ಲಕ್ಷ ರೂಪಾಯಿಗೆ ಬಡ್ಡಿ ಸೇರಿಸಿದಾಗ ಅದರ ಮೊತ್ತ ರೂ.11,65,666/- ಆಗುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನು ನೀರಾವರಿ ಜಮೀನು ಇದ್ದರು ಮತ್ತು ಅದಕ್ಕೆ ಸಾಕಷ್ಟು ಆದಾಯ ಇದ್ದರು ಸೂಕ್ತ ಆದಾಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗೆ ನಾನು ಒಬ್ಬನೇ ಮಗ ಇದ್ದೇನೆ. ದಾವಾ ಆಸ್ತಿಯು ನನ್ನ ತಂದೆ ತಾಯಿಂದ ನನಗೆ ಬಂದಿದೆ. ವಾದಿಗೆ ದಾವಾ ಹಣ ರೂ.25,65,861/- ಕೊಡಲು

ನಾನು ಬಾಧ್ಯನಾಗಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ದಾವೆಯು ಕಾಲಪರಮಿತಿಯಲ್ಲಿ ಇಲ್ಲ ಎಂದು ಬರೆದಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಕಾಲಪರಮಿತಿಯಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.